
ಪದಬಂಧ



**ಎಡದಿಂದ ಬಲಕ್ಕೆ**

1. ಅಲ್ಲಿ ಯೋಚಿಸುತ್ತ ನಿಂತಿದ್ದವನಿಗೆ ಬೇಡಿಕೊಳ್ಳದೆಯೇ ಸಿಕ್ಕಿದ್ದು 4
3. ಇಂಥ ಧೋರಣೆಯನ್ನು ಒಪ್ಪುವುದಿಲ್ಲ ಬಿಡಿ ನಮ್ಮ ಭೂಮಿ 3
4. ತರಗಿನ ಮೂಟೆಯನ್ನು ನೆಲಕ್ಕೆ ಬೀಳಿಸಿದ ಆಕರ್ಷಕ ಶಕ್ತಿ 3
6. ತಾಸಿಗಿಂತಲೂ ತಡ ಮಾಡದಿದ್ದರೆ ಮಾತ್ರ ಕಾಣಿಸೀತು ಜಲಪಾತ 4
7. ಅವನು ತೋರಿಸಿದ ಪ್ರೇಮಕ್ಕೆ ಹೋಲಿಕೆಯೇ ಇಲ್ಲ ಬಿಡಿ 4
9. ಶಾಂತಕುಮಾರನ ಮನೆಗೆ ನೂರು ವರ್ಷ ತುಂಬಿತೇ ? 4
11. ಕೋವಿಯನ್ನು ಹಿಡಿದವರನ್ನು ಕಂಡಂತೆ ಕನಸು 4
13. ಮನಸಾರೆ ಸಲ್ಲಿಸಬೇಕು ಗೌರವದ ವಂದನೆ 4
15. ಮಹಡಿಯನ್ನೇರಿ ನಿಲ್ಲದಾಗದೆ ಮರ್ಯಾದೆ ಹೋಯಿತು 4
17. ತನ್ನ ತಪ್ಪೇನೂ ಇಲ್ಲ ಎಂಬುದನ್ನೂ ಅರಿಯದ ಮಹಾ ಪೆದ್ದ 3
18. ಕಲ್ಲು ಹಾಕಿ ಕುಲುಕಿ ಕುಲುಕಿ ಎಲ್ಲ ಬೆರೆಯುವಂತೆ ಮಾಡು 3
19. ಆತನೊಬ್ಬ ಲಲಿತ ವಿದ್ಯಾ ಕೋವಿದ 4

**ಮೇಲಿನಿಂದ ಕೆಳಕ್ಕೆ**

1. ಆತ ಎಣಿಸಿ ತಂದದ್ದನ್ನೆಲ್ಲ ಜೋಡಿಸಿಟ್ಟಿದ್ದು ಹೇಗೆ? 3
2. ಗೆಲುವು ತಂದವರನು ಒಮ್ಮೆ ತಾಗು 3
3. ಪದ್ಧತಿ ಏನೇ ಇದ್ದರೂ ನಡೆಸಬಲ್ಲ ಹಣದೊಡೆಯ 3
5. ತಾವರೆಗಳನ್ನೆಲ್ಲ ಸಂಗ್ರಹಿಸಿ ತರುವ ಕೆಲಸ ಬೇಗ ಬೇಗ 3
7. ಅನ್ಯಾಯಕ್ಕೆ ಬಗ್ಗದೆ ನಿಲ್ಲುವ ದಾರಿಗಳು ಹಲವಾರು 3
8. ಎಂಥ ಮೂರ್ಖನೂ ಗುರುತಿಸಬಲ್ಲಂತಹ ಭಾರೀ ಮೊಸಳೆ 3
9. ಆಶ್ರಮವನ್ನು ನಿರ್ಮಿಸಿ ಕೊಟ್ಟ ನಂತರವಷ್ಟೇ ಕಷ್ಟಗಳ ಪರಿಹಾರ 3
10. ನಾರಿಯರಿಗೆ ಪ್ರಿಯವಾಗುವಂತಹ ಶಹರ 3
12. ನೀವೆಣಿಸಿದಂತಲ್ಲ ; ಈಕೆ ತುಂಬ ಗಟ್ಟಿ ಮಹಿಳೆ 3
14. ಮುಸುಕು ಹೊದ್ದು ನೋಡಿದಂತೆ ಎಲ್ಲವೂ ಬಹಳ ಮಬ್ಬು 3
15. ಮೂರ್ಖರ ಸಹವಾಸ ಎಂದಿಗೂ ಬಹಳ ಅಪಾಯಕರ 3
16. ನೂರಾರು ಕಾರ್ಯಗಳು ನಡೆಯುತ್ತಿವೆ ಎಂಬ ಸುದ್ದಿ ತುಂಬ ಸರಿ 3

---

## 21-09-2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಉಳಿಗಾಲ 3. ಪ್ರತಾಪ 4. ಕ್ಷಮತೆ 6. ಸಹವಾಸ 7. ನವರಸ 9. ನರೋತ್ತಮ 12. ರಣಹದ್ದು 14. ಕರಾಚಿ 15. ಮಣಿಸು 16. ಕೆಕ್ಕರಿಸು

**ಮೇಲಿನಿಂದ ಕೆಳಕ್ಕೆ**


1. ಉಪವಾಸ 2. ಲಕ್ಷಜನ 3. ಪ್ರವಾಹ 5. ತೆಪರ 6. ಸತ್ವಹೀನ 8. ಸರಹದ್ದು 10. ರೋಚಕ 11. ಮರೀಚಿಕೆ 12. ರಧುಮಸು (=ಸುಮಧುರ ತಲೆಕೆಳಗು) 13. ಹರಸು

ಪ್ರಶ್ನಾಂಕಣ

# ಆನೆಗಳಲ್ಲೂ ಉಂಟೇ ನಾಮಕರಣ?

ಆನೆಗಳನ್ನು ಕುರಿತ ಮಹದಚ್ಚರಿಯ ಶೋಧವೊಂದರ ವಿವರ ಇದೀಗ ಹೊರಬಂದಿದೆ. ಅಮೆರಿಕದ ಕಾಲರಾಡೊ ವಿಶ್ವವಿದ್ಯಾಲಯದ ಸಂಶೋಧಕರ ತಂಡವೊಂದು ಆಫ್ರಿಕಾ ಖಂಡದ ಕೀನ್ಯಾ ದೇಶದಲ್ಲಿ ಆನೆಗಳು ಸಮೃದ್ಧವಾಗಿರುವ ಸ್ಯಾಂಬುರು ಮತ್ತು ಅಂಬೋಸೇಲೀ ರಾಷ್ಟ್ರೀಯ ಉದ್ಯಾನಗಳಲ್ಲಿ ನಡೆಸಿದ ಆ ಸಂಶೋಧನೆಯ ಸಾರಾಂಶ ಇದು: ಆನೆಗಳ ಪ್ರತಿ ಹಿಂಡಿನ ಪ್ರತಿ ಆನೆಗೂ ಅದರದ್ದೇ ಒಂದು ವಿಶಿಷ್ಟ ಹೆಸರು ಇದೆ! ಆಯಾ ಹಿಂಡಿನ ಆನೆಗಳೇ ಪ್ರತಿ ಆನೆಗೂ ಹಾಗೆ ನಾಮಕರಣ ಮಾಡಿವೆ; ಪ್ರತಿ ಆನೆಯ ಹೆಸರೂ ಹಿಂಡಿನ ಉಳಿದೆಲ್ಲ ಆನೆಗಳಿಗೂ ತಿಳಿದಿದೆ! ಈ ಹೆಸರುಗಳನ್ನೇ ಹಿಡಿದು ಹಿಂಡಿನ ಎಲ್ಲ ಆನೆಗಳೂ ಒಂದನ್ನೊಂದು ಕರೆಯುತ್ತವೆ! ಇಡೀ ಪ್ರಾಣಿ ಸಾಮ್ರಾಜ್ಯದಲ್ಲಿ ಮನುಷ್ಯರನ್ನು ಬಿಟ್ಟರೆ ಆನೆಗಳಲ್ಲಿ ಮಾತ್ರವೇ ಈ ನಾಮಕರಣ ಕ್ರಮ ಇದೆ ಎಂಬುದು ಇಲ್ಲಿ ಗಮನಿಸಬೇಕಾದ ಪರಮ ವಿಸ್ಮಯದ ಅಂಶ. ಅತ್ಯಂತ ಕುತೂಹಲದ ಈ ಸಂಶೋಧನೆಯ ಮುದ್ರಣ ಪೂರ್ವ ವರದಿ ಪ್ರಸಿದ್ಧ ವಿಜ್ಞಾನ ವಾರ್ತಾ ಪತ್ರ 'ಬಯೊ ಆರ್ಕೈವ್ (bioArxiv) ಪ್ರಕಟವಾಗಿದೆ.

ನಿಮಗೇ ತಿಳಿದಿರಬಹುದಾದಂತೆ ಬುದ್ಧಿವಂತ ಪ್ರಾಣಿಗಳಾದ ಆನೆಗಳು ತಮ್ಮದೇ ವಿಶಿಷ್ಟ ಧ್ವನಿಶಬ್ದ ಭಾಷೆಯನ್ನು ಹೊಂದಿವೆ. ಅವು ಹತ್ತಾರರಿಂದ ನೂರಾರರವರೆಗಿನ ಸಂಖ್ಯೆಗಳಲ್ಲಿ ಹಿಂಡುಹಿಂಡಾಗಿ ಬದುಕು ನಡೆಸುತ್ತವೆ (ಚಿತ್ರಗಳಲ್ಲಿ ನೋಡಿ). ಗುಂಪಿನಲ್ಲಿರುವಾಗ ಮತ್ತು ಒಂದಕ್ಕೊಂದು ಕಾಣದಂತೆ ದೂರ ದೂರ ಚದುರಿರುವಾಗ ಹಿಂಡಿನ ಎಲ್ಲ ಆನೆಗಳೂ ಒಂದರೊಡನೊಂದು ಸಂಪರ್ಕದಲ್ಲಿರಲು ತಮ್ಮ ಈ ಭಾಷೆಯನ್ನು ಬಳಸುತ್ತವೆ. ಸಮೃದ್ಧ ಆಹಾರ ಪತ್ತೆಯಾಗಿರುವುದನ್ನು, ಶತ್ರುಗಳು ಎದುರಾಗಿರುವುದನ್ನು, ತೊಂದರೆಗೆ ಸಿಲುಕಿರುವುದನ್ನು, ಸಹಾಯದ ಅಗತ್ಯ ಇರುವುದನ್ನು ಹೀಗೆಲ್ಲ ನಾನಾ ಸಮಾಚಾರಗಳನ್ನು ಹಿಂಡಿನ ಎಲ್ಲ ಜೊತೆಗಾರರಿಗೂ ಇದ್ದಲ್ಲಿಂದಲೇ ಅರುಹಲು ಈ ಭಾಷೆಯೇ ಅವಕ್ಕಿರುವ ಸಂಪರ್ಕ ಸಾಧನ.



ಆದರೆ, ಸ್ಪಷ್ಟವಾಗಿಯೇ, ಯಾವುದೇ ಆನೆ ತನ್ನ ಹಿಂಡಿನ ಬೇರಾವುದೇ ನಿರ್ದಿಷ್ಟ ಆನೆಯನ್ನು ಬಳಿಗೆ ಕರೆಯಲು, ಹಿಂಡಿನಿಂದ ಕಳೆದುಹೋದ ಆನೆ ಯಾವುದೆಂಬುದನ್ನು ಎಲ್ಲರಿಗೂ ತಿಳಿಸಲು, ಪುಂಡಾಟ ಆರಂಭಿಸಿದ ಆನೆ ಯಾವುದೆಂಬುದನ್ನು ಉಳಿದೆಲ್ಲರ ಗಮನಕ್ಕೆ ತರಲು... ಇಂಥವೆಲ್ಲ ಕೆಲಸಗಳಿಗೆ ಪ್ರತಿ ಆನೆಗೂ ಒಂದೊಂದು ಶಾಶ್ವತ ಗುರುತಿನ ಹೆಸರು ಅತ್ಯವಶ್ಯ ತಾನೇ? ಆದ್ದರಿಂದಲೇ ಆನೆಗಳು ನಾಮಕರಣ ಕ್ರಮವನ್ನು ರೂಢಿಸಿಕೊಂಡಿವೆ.

ಆದರೆ ಆನೆಗಳ ಹೆಸರುಗಳು ಮನುಷ್ಯರಲ್ಲಿರುವಂತೆ ಅಲ್ಲ. ಆನೆಗಳ ಹೆಸರುಗಳು ನಿರ್ದಿಷ್ಟ ಶಬ್ದ ಲಕ್ಷಣಗಳಿಂದ ಸಂಯೋಜನೆಗೊಂಡ ವಿಶಿಷ್ಟ ಕರೆಗಳು! ಪ್ರತಿ ಹೆಸರೂ ನಿರ್ದಿಷ್ಟ ಕಾಲಾವಧಿಯ (ಉದ್ದದ), ನಿರ್ದಿಷ್ಟ ಸ್ವರಗಳ, ನಿರ್ದಿಷ್ಟ ಏರಿಳಿತಗಳ ಒಂದು ಶಬ್ದ ಸಂಕೇತ! ಎಂಥ ಸೋಜಿಗ! ಅಲ್ಲವೇ?

■ ಎನ್. ವಾಸುದೇವ್